ಎತ್ತಿಕೊಂಡು ಹೋಗಿದ್ದಾರೆ ಅಂತ ಅಂದುಕೊಳ್ತಿದ್ದಾಗ, ಡಾಕ್ಟ್ರು ಬಂದ್ರು.

ಕೈಹಿಡ್ದು ಅಂದ್ರು, "ಸ್ಸಾರಿ ಮಂದಾಕಿನಿ, ಇಟ್ ವಾಸ್ ಎಸ್ ಅಬಾರ್ಷನ್. ರೇರೆಸ್ಟ್ ಆಫ್ ದ ರೇರ್ ಕೇಸಸ್. ಆರು ತಿಂಗ್ಳಾದ ಮೇಲೆ ಅಬಾರ್ಷನ್ ಆದದ್ದೇ ಇಲ್ಲ. ಯು ಹ್ಯಾಡ್ ಕಮ್ ಜಸ್ಟ್ ಇನ್ ಟೈಮ್. ವೀ ಕುಡ್ ಅಟ್ಲೀಸ್ಟ್ ಸೇವ್ ಯೂ. ನಿನ್ನನ್ನು ಉಳಿಸಿದ ಹಾಗಾಯ್ತು."

ಹಲ್ಲು ಕಚ್ಚಿದ್ಲು ಮಂದಾಕಿನಿ. ದವಡೆಗಳ ಮಸ್ಲು ಕಣ್ಣಗಲವಾಯ್ತು. ಕೆಂಪಾಯ್ತು, ಕಣ್ಣ ಅಂಚಿನಲ್ಲಿ ನೀರು ಸುರಿಯುತು. ಹಣೆಯ ಮೇಲೆ ಬೆವರ ಹನಿ ಸಾಲುಗಟ್ಟಿ, ಮೂಗಿನ ಹೊಳ್ಳೆಗಳಲ್ಲಿ ಬಿಸಿಯುಸಿರು ಭುಸುಗುಟ್ಟಿ, ಎದೆಯ ಕಮ್ಮಾರನ ಚರ್ಮದ ಚೀಲವಾಗಿ ಬದುಕಿನ ಎಲ್ಲಾ ನೋವು, ರೋಷ, ಹತಾಶೆಗಳು ಒಮ್ಮೆಲೆ ಭೋರ್ಗರೆದು ಗಂಟಲ ನರ ಉಬ್ಬಿ, ಮೈ ಸೆಟೆದು ಮೂರು ಲೋಕಕ್ಕೆ ಕೇಳಿಸುವ ರೀತಿನಲ್ಲಿ ಮಂದಾಕಿನಿ ಬಿಕ್ಕಿದ್ಲು.

"ಎಲ್ಲಿ ಉಳಿಸಿದ್ರಿ? ಏನು ಉಳಿದದ್ದು? ಮದುವೆಯಾದಾಗ್ಲೇ ಕೌಮಾರ್ಯ ಕಳೆದಿತ್ತು. ಬಸುರಾದೆ. ಮಂದಾಕಿನಿ! ಹುಡುಗಿ, ಮಂದಾಕಿನಿ! ಉಳೀಲಿಲ್ಲ! ಆಕೆ ಸತ್ತಾಗಿತ್ತು. ಮಗು ಹುಟ್ಟಿ ತಾಯಿಯಾಗಿ ಬರಬೇಕಾಗಿತ್ತು. ಮಗು ಸತ್ತಿತ್ತು. ತಾಯೀನೂ ಸತ್ಲು. ಈಗುಳಿದಿರೋದು ರಕ್ತ ಮಾಂಸದ ದೇಹ, ಮೇಲ ತೊಗಲ ಹೊದಿಕೆ, ಜನ್ಮಾಂತರದ ಕರ್ಮ ಸವೆಸೋಕೆ ಆತ್ಮ ಹೊಯ್ದಾಡ್ತಿದೆ ಅಷ್ಟೆ. ಪಾಳು ದೇಗುಲದೊಳು ಗಾಳಿ ಗೋಳಿಡುವ್ಹೊಲು ಉಸಿರಾಡುತಿದೆ ಜೀವ." ಮಂದಾಕಿನಿ ಮಂಚದ ಮೂಲೆಗೆ ನಿಧಾನವಾಗಿ ಮುದುರಿ ಮೌನಕ್ಕೆ ಜಾರಿದಳು.

★★★

ಹುಟ್ಟಿದ್ದು ಶುಕ್ರವಾರವಂತೆ. ಲಕ್ಷ್ಮಿ ಅಂತ ಕರ್ದಿದ್ರು. ಶಾಲೆಗೆ ಸೇರಿಸಬೇಕಾದ್ರೆ ಅದು ಹಳೇ ಕಾಲದ ಹೆಸ್ರು ಅಂತಾಗಿ ಮಂದಾಕಿನಿ ಅಂತ ಕರ್ದಿದ್ರು. ಸಹ್ಯಾದ್ರಿಯ ತಪ್ಪಲಿನ ಒಂದು ಕೆಳಮಧ್ಯಮ ವರ್ಗದ ಮನೆಯ ಹುಡುಗಿ. ಕಾಡ ಕಸುವು ಇತ್ತು. ನಾಡ ಬೆಳಕೂ ಇತ್ತು. ಅಪ್ಪ ಹೈಸ್ಕೂಲು ಮೇಸ್ಟ್ರು. ಅಮ್ಮ ಪೋಸ್ಟಾಫೀಸಿನಲ್ಲಿ ಕ್ಲರ್ಕ್ ಆಗಿದ್ರು. ಬೇಕಾದ್ದಕ್ಕೆ ಖರ್ಚು ಮಾಡುವಷ್ಟಿತ್ತು. ಬ್ಯಾಡದ್ದಕ್ಕೆ ಚೆಲ್ಲುವಷ್ಟಿರ್ಲಿಲ್ಲ.

ಬುದ್ಧಿವಂತೆ. ಸ್ಕೂಲು, ಕಾಲೇಜುಗಳಲ್ಲಿ ಓದಿನಲ್ಲಿ ಮುಂದು. ಹಾಗಂತ ಮಿಕ್ಕದ್ರಲ್ಲಿ ಇಲ್ಲ ಅಂತ ಅಲ್ಲ. ಹಾಡಿದ್ರೆ ಸೌಂದರ್ಯ ಲಹರೀನೇ; ವಾಚಿಸಿದ್ರೆ ಅಡಿಗ; ಉಲಿದರೆ ಅನಂತಮೂರ್ತಿ; ಚರ್ಚೆಗೆ ಕಾರಂತ, ಭೈರಪ್ಪ; ಭಕ್ತಿಗೆ ಶೃಂಗೇರಿ, ಹೊರನಾಡು; ಚಾರಣಕ್ಕೆ ಕೊಡಚಾದ್ರಿ, ಕುದುರೆಮುಖ; ಕುಡಿದ್ರೆ ತುಂಗೆ; ತಿನ್ನಕ್ಕೆ ಮಾವು, ಹಲಸು, ಸೀಬೆ. ಸ್ವರ್ಗದಲ್ಲಿದ್ದು ಅಪ್ಸರೆ.

ಅದೇನೋ ಕಾಲೇಜು ಓದ್ತಿದ್ದಾಗ್ಲೇ ಗೆಳೆಯನೊಬ್ಬನೊಟ್ಟಿಗೆ ಪ್ರೀತಿ ಅಂಕುರವಾಗಿತ್ತು. ಗಟ್ಟಿಯಾಗೇ ಇದ್ದ. ಗಾಡಿ ಓಡಿಸ್ತಿದ್ದ. ಇವಳ ವಿಹಾರಕ್ಕೆ ಇಂಬಾಗಿದ್ದ. ಅವನೂ ಬುದ್ಧಿವಂತ್ನೇ. ಇಬ್ಬರ ಮನೇಲೂ ವಿಷ್ಯ ಬಂತು. ಎಲ್ಲಾ ಸರಿ, ಜಾತಿ ಸ್ವಲ್ಪ ಬೇರೆ. ಬಹಳ ಏನಿಲ್ಲ, ಅವರು ಬಯಸ್ತಿದ್ದದ್ದು ನಾರು ಬೇರೆ! ಇವರದ್ದೂ ಅದೇ! ಇಲ್ಲಿ ಇವಳು ಒಬ್ಳೇ ಮಗ್ಳು. ಅಲ್ಲಿ ಅವನೊಬ್ನೇ ಮಗ. ಅವನಪ್ಪ ಕಂಟ್ರಾಕ್ಟ್ರು. ಅಮ್ಮ ಬ್ಯಾಂಕಲ್ಲಿದ್ರು. ಎಲ್ಲಾ ಅಕ್ಷರಸ್ಥರೇ ಆಗಿದ್ರಿಂದ, ಮತ್ತಿಬ್ರ ಮನೇಲೂ ಒಂದೊಂದೇ ಇದ್ದಿದ್ರಿಂದ ಸಮಸ್ಯೆ ಆಗ್ಲಿಲ್ಲ.

ಅವನು ಸಿವಿಲ್ ಸರ್ವಿಸಸ್ ಎಕ್ಸಾಮ್ ತಗಂಡಿದ್ದ. ಅಲ್ಲಿ ಪಾಸಾಗಿ ಸೆಲೆಕ್ಟ್ ಆಗೋವರ್ಗೂ ಕಾದ್ರು. ಸೆಲೆಕ್ಟ್ ಆಯ್ತು. ಟ್ರೈನಿಂಗ್‌ಗೆ ಡಾರ್ಜಲಿಂಗ್‌ಗೆ ಹೋಗ್ಬೇಕು. ಮದುವೆಯಾಗಿ ಡಾರ್ಜಲಿಂಗ್ ಅಲ್ಲಿ ಟ್ರೈನಿಂಗ್ ಒಟ್ಟಿಗೆ ಹನಿಮೂನು ಅಂತ ಆಯ್ತು. ಸಂಸಾರನೂ ಶುರುವಾಯ್ತು. ಮೊದಲ ಮೂರು ವರ್ಷ ಹ್ಯಾಗೆ ಕಳೀತು ಅನ್ನೋದು ಗೊತ್ತೇ ಆಗ್ಲಿಲ್ಲ.